ಇವುಗಳನ್ನು ಪಾಲಿಸದಿರಲು ಕಾರಣಗಳೇನು;

ಊ) ಜಿಲ್ಲಾ ಮಟ್ಟದ ಸಭೆಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳ ಅಗತ್ಯವಿದೆಯೇ? (ವಿವರ ಒದಗಿಸುವುದು)

ಶ್ರೀ ರಾಮಚಂದ್ರಗೌಡ (ಮಾನ್ಯ ಯೋಜನಾ ಸಚಿವರು) :

ಅ, ಆ, ಇ) ಕರ್ನಾಟಕ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಕುರಿತು ತಿಂಗಳಿಗೆ ಒಂದರಂತೆ ವರ್ಷಕ್ಕೆ 12 ಬಾರಿ ಸಭೆಗಳು ನಡೆಯುತ್ತವೆ.

ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು ಕೆಡಿಪಿ ಸಭೆಗೆ ಹಾಜರಾಗಬೇಕಾಗುತ್ತದೆ. ತಾಲ್ಲೂಕು ಮಟ್ಟದ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲಿಸಲು ಸಭೆಗೆ ಆಹ್ವಾನಿಸಲಾಗುವುದು.

ಈ) ಹಾಸನ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಎಲ್ಲ ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ 3–4 ಬಾರಿ ಸಭೆಗೆ ಹಾಜರಾಗುತ್ತಿಲ್ಲವೆಂದು ತಿಳಿಸಿರುತ್ತಾರೆ.

ಉ) ಉದ್ಭವಿಸುವುದಿಲ್ಲ

ಊ) ಅಗತ್ಯವಿದೆ. ತಾಲ್ಲೂಕು ಮಟ್ಟದ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳಾದ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಎಸ್.ಜಿ.ಎಸ್.ವೈ, ಎಂ.ಎಂ.ಆರ್. ಕೆ.ಡಿ.ಪಿ. ಆಶ್ರಯ, ಸುವರ್ಣ ಗ್ರಾಮೋದಯ ಯೋಜನೆಗಳಂತಹ ಯೋಜನೆಗಳ ಪ್ರಗತಿ ಪರಿಶೀಲಿಸಲು ಆಹ್ವಾನಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

944 ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ 2004–05, 2005–06 ಮತ್ತು 2007 ನೇ ಸಾಲಿನಲ್ಲಿ ರೇಷ್ಮೆ ಬೆಳೆಯುವ ಪ್ರದೇಶ ಎಷ್ಟು ; (ವರ್ಷವಾರು ವಿವರ ನೀಡುವುದು)

ಆ) ರಾಮದುರ್ಗ ತಾಲ್ಲೂಕು ರೇಷ್ಮೆ ಇಲಾಖೆಯ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಕಛೇರಿಗೆ ಅವಶ್ಯಕ ಸಿಬ್ಬಂದಿಯನ್ನು ನೇಮಕಾತಿ ಮಾಡುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ 2004–05, 2005–06 ಮತ್ತು 2006–07 ನೇ ಸಾಲಿನಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಅವುಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; (ಫಲಾನುಭವಿಗಳ ವಿವರಣೆಯನ್ನು ನೀಡುವುದು) ?

ಶ್ರೀ ಎಸ್. ಶಿವಣ್ಣ (ಮಾನ್ಯ ರೇಷ್ಮೆ ಸಚಿವರು) :

ಅ) ರಾಮದುರ್ಗ ತಾಲ್ಲೂಕಿನ ವರ್ಷವಾರು ಹಿಪ್ಪುನೇರಳೆ ವ್ಯವಸಾಯದ ವಿವರ ಕೆಳಕಂಡಂತಿದೆ.

ವರ್ಷ	ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
1) 2004–05	4.40
2) 2005–06	6.80
3) 2006–07	12.80

ಆ) ಬಂದಿಲ್ಲ,

ರಾಮದುರ್ಗ ತಾಲ್ಲೂಕಿನಲ್ಲಿ ಕೆಳಕಂಡ ಇಲಾಖೆಯ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ ಮಂಜೂರಾದ ಮತ್ತು ಭರ್ತಿಯಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಕಛೇರಿ / ಹುದ್ದೆ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ
1) ರೇಷ್ಮೆ ಕೃಷಿ ಕ್ಷೇತ್ರ (ರಾಮದುರ್ಗ)	1	1

1) ರೇಷ್ಮೆ ನಿರೀಕ್ಷಕರು

2) ಚಾಕಿ ಸಾಕಾಣಿಕೆ ಕೇಂದ್ರ, ಹುಲಕುಂದ 2 2

1) ರೇಷ್ಮೆ ಪ್ರವರ್ತಕರು

ಇ) ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇದಲ್ಲದೆ ತಾಲ್ಲೂಕಿನ ವಿಸ್ತರಣಾ ಚಟುವಟಿಕೆಗಳಿಗಾಗಿ ಒಬ್ಬ ರೇಷ್ಮೆ ನಿರೀಕ್ಷಕರನ್ನು ಹಾಗೂ ಮೂವರು ಸಂಖ್ಯಾತಿರಿಕ್ತ ನೌಕರರನ್ನು ಅನ್ಯ ಕಾರ್ಯ ನಿಮಿತ್ತ ನಿಯೋಜಿಸಲಾಗಿದೆ.

ಈ) ಕಳೆದ ಮೂರು ವರ್ಷಗಳಲ್ಲಿ ರಾಮದುರ್ಗ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಿದ ಯೋಜನೆ/ ಕಾರ್ಯಕ್ರಮಗಳಿಗೆ ಆದ ಸಹಾಯಧನದ ವೆಚ್ಚ ಹಾಗೂ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.

ಯೋಜನೆ	ವೆಚ್ಚ (ರೂ. ಲಕ್ಷ)	ಫಲಾನುಭವಿಗಳ ಸಂಖ್ಯೆ
2004– 05	ಇಲ್ಲ	ಇಲ್ಲ
2005– 06		
1) ವಿಶೇಷ ಘಟಕ ಯೋಜನೆ	0.17	2
2) ಕೆಟಿಲಿಟಿಕ್ ಅಭಿವೃದ್ಧಿ ಯೋಜನೆ		
ಅ) ಹನಿ ನೀರಾವರಿ	0.24	1
ಆ) ಕಿಸಾನ್ ನರ್ಸರಿ	0.31	4
2006 – 07		
1) ವಿಶೇಷ ಘಟಕ ಯೋಜನೆ	0.17	2
2) ಕೆಟಿಲಿಟಿಕ್ ಅಭಿವೃದ್ಧಿ ಯೋಜನೆ		
ಅ)ರೇಷ್ಮೆ ಹುಳು ಸಾಕಾಣಿಕೆ ಮನೆ	0.50	1

3) **ರೇಷ್ಮೆ ವರದಾನ ಯೋಜನೆ**

ಅ) ಹಿಪ್ಪುನೇರಳೆ ನಾಟಿ 0.475 10

4) **ತಾಲ್ಲೂಕು ಪಂಚಾಯತ್ ಯೋಜನೆ**

ಅ)ರೇಷ್ಮೆ ಹುಳು ಸಾಕಾಣಿಕೆ ಮನೆ 0.50 2

1377 ಶ್ರೀ ರಘುಪತಿ ಭಟ್ ಕೆ. (ಉಡುಪಿ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ವಾಸ್ತವ್ಯವಿದ್ದು, ಹಕ್ಕುಪತ್ರ ಪಡೆಯಲು ಅರ್ಹರಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ಗ್ರಾಮ ಪಂಚಾಯತಿವಾರು ಮಾಹಿತಿ ನೀಡುವುದು);

ಆ) ಆ ಪೈಕಿ ಕಂದಾಯ ಅಧಿನಿಯಮ 94 ಸಿ ರಡಿ ಅರ್ಜಿ ನೀಡಿದವರ ಸಂಖ್ಯೆ ಎಷ್ಟು;

ಇ) ಈ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ವಿಳಂಬವಾಗಲು ಕಾರಣವೇನು; ಇವರೆಲ್ಲರಿಗೆ ಗ್ರಾಮ ಪಂಚಾಯತದ ವಸತಿ ಸಮಿತಿ ಮೂಲಕ ಹಕ್ಕುಪತ್ರ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಈ) ಕಂದಾಯ ಅಧಿನಿಯಮ 94 ಸಿ ಯಡಿಯಲ್ಲಿ ಇವರಿಗೆ ಹಕ್ಕುಪತ್ರ ನೀಡಲು ಅವಧಿ ವಿಸ್ತರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಮಾನ್ಯ ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 911. (ಗ್ರಾಮ ಪಂಚಾಯತ್‌ವಾರು ಮಾಹಿತಿ ಲಗತ್ತಿಸಿದೆ)

ಆ) 2060.

ಇ) ಒಟ್ಟು 911 ಅರ್ಜಿಗಳ ಪೈಕಿ ಈಗಾಗಲೇ 745 ಮಂದಿಗೆ ಹಕ್ಕುಪತ್ರ ನೀಡಲಾಗಿದೆ. ಉಳಿದ 166 ಮಂದಿಗೆ ಸ್ಥಳಮೌಲ್ಯ ಪಾವತಿಸಲು ಬಾಕಿ ಇರುವುದರಿಂದ ಹಕ್ಕುಪತ್ರ ನೀಡಿಲ್ಲ. ಇವರು ಸ್ಥಳ ಮೌಲ್ಯ ಪಾವತಿಸಿದ ಕೂಡಲೇ ಹಕ್ಕುಪತ್ರ ವಿತರಿಸಲು ಕ್ರಮ